# All India Radio: Bangalore
# National Bulletin In Kannada
# 18.07.2025  7.35 am

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<><><><>**

ಮುಖ್ಯಾಂಶಗಳು

೧. ಬಿಹಾರದಲ್ಲಿಂದು ೭ ಸಾವಿರದ ೨೦೦ ಕೋಟಿ ರೂಪಾಯಿಗೂ ಹೆಚ್ಚು ಮೌಲ್ಯದ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಲಿರುವ ಪ್ರಧಾನಿ ನರೇಂದ್ರ ಮೋದಿ

೨. ಒಡಿಶಾದಲ್ಲಿ ಪೃಥ್ವಿ ೨ ಮತ್ತು ಅಗ್ನಿ ೧ ಪರಮಾಣು ಸಾಮರ್ಥ್ಯದ ಕ್ಷಿಪಣಿಗಳ ಯಶಸ್ವಿ ಪರೀಕ್ಷೆ

೩. ವಿಶಾಖಪಟ್ಟಣದಲ್ಲಿಂದು ಸ್ವದೇಶಿ ನಿರ್ಮಿತ ಮೊದಲ ಡೈವಿಂಗ್ ಬೆಂಬಲ ಹಡಗು ಐಎನ್ಎಸ್ ನಿಸ್ತಾರ್ ಕಾರ್ಯಾರಂಭ

೪. ಪಹಲ್ಗಾಮ್ ಭಯೋತ್ಪಾದಕ ದಾಳಿ ಹಿಂದಿನ ದಿ ರೆಜಿಸ್ಟೆನ್ಸ್ ಫ್ರಂಟ್  ಅನ್ನು ಭಯೋತ್ಪಾದಕ ಸಂಘಟನೆ ಎಂದು ಘೋಷಿಸಿದ ಅಮೆರಿಕಾ

೫. ಬುಡಾಫೆಸ್ಟ್, ಕುಸ್ತಿ ಪಂದ್ಯಾವಳಿ; ಭಾರತದ ಸುಜೀತ್ ಗೆ ಚಿನ್ನ

><><><><><><><><><><

ಪ್ರಧಾನಮಂತ್ರಿ ನರೇಂದ್ರ ಮೋದಿ ಇಂದು ಬಿಹಾರಕ್ಕೆ ಭೇಟಿ ನೀಡುತ್ತಿದ್ದು, ಪೂರ್ವ ಚಂಪಾರಣ ಜಿಲ್ಲೆಯ ಮೊತಿಹಾರಿಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಅವರು ೭ ಸಾವಿರದ ೨೦೦ ಕೋಟಿ ರೂಪಾಯಿಗೂ ಹೆಚ್ಚು ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಲಿದ್ದು, ಕೆಲವು ಯೋಜನೆಗಳನ್ನು ರಾಷ್ಟ್ರಕ್ಕೆ ಸಮರ್ಪಿಸಲಿದ್ದಾರೆ. ರೈಲು, ರಸ್ತೆ, ಗ್ರಾಮೀಣಾಭಿವೃದ್ಧಿ, ಮೀನುಗಾರಿಕೆ, ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರಗಳಿಗೆ ಸಂಬಂಧಿಸಿದ ಯೋಜನೆಗಳಿಗೆ ಪ್ರಧಾನಿ ಚಾಲನೆ ನೀಡಲಿದ್ದಾರೆ. ರೈಲು ಸಂಪರ್ಕವನ್ನು ಉತ್ತೇಜಿಸುವ ಸಲುವಾಗಿ, ಪ್ರಧಾನಿ ನಾಲ್ಕು ಹೊಸ ಅಮೃತ್ ಭಾರತ್ ರೈಲುಗಳಿಗೆ ಹಸಿರು ನಿಶಾನೆ ತೋರಲಿದ್ದಾರೆ. ಅದರಲ್ಲಿ ರಾಜೇಂದ್ರ ನಗರ ಟರ್ಮಿನಲ್-ನವದೆಹಲಿ, ಬಾಪುಧಾಮ್ ಮೊತಿಹಾರಿ-

ಆನಂದ್ ವಿಹಾರ್, ದರ್ಭಾಂಗಾ-ಲಖನೌ ಹಾಗೂ ಮಾಲ್ಡಾ ಟೌನ್-ಲಖನೌ ನಡುವಿನ ರೈಲು ಸೇವೆಗಳು ಸೇರಿವೆ. ೫೮೦ ಕೋಟಿ ರೂಪಾಯಿ ವೆಚ್ಚದ ದರ್ಬಾಂಗಾ-ಸಮಸ್ತಿಪುರ ಡಬ್ಬಲಿಂಗ್ ಯೋಜನೆ, ಸಮಸ್ತಿಪುರ-ಬಚ್ವಾರ ನಡುವೆ ಸ್ವಯಂಚಾಲಿತ ಸಿಗ್ನಲ್ ವ್ಯವಸ್ಥೆ, ಪಟ್ನಾದ ಪಾಟಲೀಪುತ್ರದಲ್ಲಿ ವಂದೇ ಭಾರತ್ ರೈಲುಗಳ ನಿರ್ವಹಣಾ ಕೇಂದ್ರ ಸೇರಿದಂತೆ ಹಲವು ರೈಲು ಕಾಮಗಾರಿಗಳಿಗೆ ಚಾಲನೆ ದೊರೆಯಲಿವೆ. ರಸ್ತೆ ಅಭಿವೃದ್ಧಿಯ ಭಾಗವಾಗಿ ರಾಷ್ಟ್ರೀಯ ಹೆದ್ದಾರಿ-೩೧೯ರ ಅರಾ ಬೈಪಾಸ್ ಹಾಗೂ ಪರಾರಿಯಾ-ಮೊಹನಿಯಾ ಭಾಗದ ಚತುಷ್ಪಥ ರಸ್ತೆಗೆ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ಮಾಡಲಾಗುತ್ತಿದೆ. ಬಿಹಾರ-ಝಾರ್ಖಂಡ್ ಸಂಪರ್ಕ ಸುಲಭಗೊಳಿಸಲು ಸರ್ವಾನ್-ಚಕಾಯಿ ಭಾಗದ ಎರಡು ಮಾರ್ಗದ ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಮಾಹಿತಿ ತಂತ್ರಜ್ಞಾನ ವಲಯವನ್ನು ಉತ್ತೇಜಿಸಲು ದರ್ಬಾಂಗಾ ಮತ್ತು ಪಟ್ನಾದಲ್ಲಿನ ಸಾಫ್ಟ್‌ವೇರ್ ತಂತ್ರಜ್ಞಾನ ಪಾರ್ಕ್ ಹಾಗೂ ಸ್ಟಾರ್ಟಪ್ ಇನ್‌ಕ್ಯೂಬೇಶನ್ ಸೌಲಭ್ಯಗಳ ಉದ್ಘಾಟನೆ ನಡೆಯಲಿದೆ. ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ನವೀನ ಮೀನುಗಾರಿಕಾ ಕೇಂದ್ರ, ಬಯೋ ಫ್ಲಾಕ್ ಘಟಕಗಳು, ಅಲಂಕಾರಿಕ ಮೀನು ಕೃಷಿ ಘಟಕಗಳು ಸೇರಿದಂತೆ ಮೀನುಗಾರಿಕೆ ಯೋಜನೆಗಳ ಉದ್ಘಾಟನೆ ನಿಗದಿಯಾಗಿದೆ. ಇದರ ಜೊತೆಗೆ ಪ್ರಧಾನಿ, ದೀನದಯಾಳ್ ಅಂತ್ಯೋದಯ ಯೋಜನಾ- ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆಯಡಿ ೬೧ ಸಾವಿರ ಸ್ವಸಹಾಯ ಗುಂಪುಗಳಿಗೆ ೪೦೦ ಕೋಟಿ ನೆರವು ಬಿಡುಗಡೆಗೊಳಿಸಲಿದ್ದು, ೧೨ ಸಾವಿರ ಮನೆಗಳ ಗೃಹ ಪ್ರವೇಶ, ಮತ್ತು ಪ್ಧಾನ ಮಂತ್ರಿ ಆವಾಸ್ ಗ್ರಾಮೀಣ ಯೋಜನೆಯಡಿ ೪೦ ಸಾವಿರ ಫಲಾನುಭವಿಗಳಿಗೆ ೧೬೦ ಕೋಟಿ ರೂಪಾಯಿ ಬಿಡುಗಡೆ ಮಾಡಲಿದ್ದಾರೆ.

><><><><><><><><><><

ಭಾರತ ಒಡಿಶಾ ಕರಾವಳಿಯ ಚಂಡಿಪುರದಲ್ಲಿರುವ ಸಮಗ್ರ ಪರೀಕ್ಷಾ ಶ್ರೇಣಿಯಿಂದ ಪೃಥ್ವಿ-೨ ಮತ್ತು ಅಗ್ನಿ-೧ ಎಂಬ ಪರಮಾಣು ಸಾಮರ್ಥ್ಯದ ಕಿರು ವ್ಯಾಪ್ತಿಯ ಬ್ಯಾಲಿಸ್ಟಿಕ್ ಕ್ಷಿಪಣಿಗಳ ಯಶಸ್ವಿ ಪರೀಕ್ಷೆಗಳನ್ನು ನಡೆಸಿದೆ.ಎಲೈಟ್ ಸ್ಟ್ರಾಟೆಜಿಕ್ ಫೋರ್ಸಸ್ ಕಮಾಂಡ್ ನಡೆಸಿದ ಕ್ಷಿಪಣಿಗಳ ಪರೀಕ್ಷಾರ್ಥ ಉಡಾವಣೆಯು ಎಲ್ಲಾ ಕಾರ್ಯಾಚರಣೆ ಮತ್ತು ತಾಂತ್ರಿಕ ನಿಯತಾಂಕಗಳನ್ನು ಮೌಲ್ಯೀಕರಿಸಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.ಭಾರತ ಲಡಾಖ್‌ನಲ್ಲಿ ಸ್ಥಳೀಯವಾಗಿ

ಅಭಿವೃದ್ಧಿಪಡಿಸಿದ ಆಕಾಶ್ ಪ್ರೈಮ್ ಕ್ಷಿಪಣಿಯನ್ನು ಬುಧವಾರ, ಯಶಸ್ವಿಯಾಗಿ ಪರೀಕ್ಷಿಸಲಾಗಿದೆ. ಇದನ್ನು ೪ ಸಾವಿರದ ೫೦೦ ಮೀಟರ್‌ಗಿಂತ ಹೆಚ್ಚಿನ ಎತ್ತರದಲ್ಲಿ ಕಾರ್ಯನಿರ್ವಹಿಸುವಂತೆ ಸುಧಾರಿಸಲಾಗಿದೆ.ಪೃಥ್ವಿ-೨ ಕ್ಷಿಪಣಿ ಸುಮಾರು ೩೫೦ ಕಿಮೀ ದೂರವನ್ನು ಕ್ರಮಿಸುವ ಶಕ್ತಿಯನ್ನು ಹೊಂದಿದೆ ಮತ್ತು ೫೦೦ ಕೆಜಿ ವರೆಗೆ ಪೇಲೋಡ್ ಅನ್ನು ಸಾಗಿಸುವ ಸಾಮರ್ಥ್ಯವನ್ನು ಹೊಂದಿದೆ. ಇದು ಸಾಂಪ್ರದಾಯಿಕ ಮತ್ತು ಪರಮಾಣು ಕ್ಷಿಪಣಿಗಳನ್ನು ಸಾಗಿಸಬಲ್ಲದು.ಅಗ್ನಿ-೧ ಕ್ಷಿಪಣಿ ೭೦೦-೯೦೦ ಕಿಮೀ ಕ್ರಮಿಸುವ ಶಕ್ತಿಯನ್ನು ಹೊಂದಿದೆ ಮತ್ತು ೧ ಸಾವಿರ ಕೆಜಿ ಪೇಲೋಡ್ ಅನ್ನು ಸಾಗಿಸಬಲ್ಲದು.

><><><><><><><><><><

ಭಾರತೀಯ ನೌಕಾಪಡೆಯು ತನ್ನ ಮೊದಲ ಸ್ಥಳೀಯ ಡೈವಿಂಗ್ ಬೆಂಬಲ ಹಡಗು ಐಎನ್‌ಎಸ್ ನಿಸ್ತಾರ್‌ನ ಕಾರ್ಯಾರಂಭಕ್ಕೆ ಇಂದು ವಿಶಾಖಪಟ್ಟಣದಲ್ಲಿ ಚಾಲನೆ ನೀಡಲಿದೆ.'ನಿಸ್ತಾರ್' ಎಂಬ ಹೆಸರು ಸಂಸ್ಕೃತದಿಂದ ಹುಟ್ಟಿಕೊಂಡಿದ್ದು, ಇದರ ಅರ್ಥ ವಿಮೋಚನೆ, ರಕ್ಷಣೆ ಅಥವಾ ಮೋಕ್ಷ ಎಂಬುದಾಗಿದೆ.ವಿಶಾಖಪಟ್ಟಣಂನಲ್ಲಿರುವ ಹಿಂದೂಸ್ತಾನ್ ಶಿಪ್‌ಯಾರ್ಡ್ ಲಿಮಿಟೆಡ್‌ನಿಂದ ಸ್ಥಳೀಯವಾಗಿ ವಿನ್ಯಾಸಗೊಳಿಸಲ್ಪಟ್ಟ ಮತ್ತು ನಿರ್ಮಿಸಲಾದ ನಿಸ್ತಾರ್, ರಕ್ಷಣಾ ಉತ್ಪಾದನೆಯಲ್ಲಿ ಭಾರತದ 'ಆತ್ಮನಿರ್ಭರತೆಯ ಅನ್ವೇ?ಣೆಯಲ್ಲಿ ಒಂದು ಪ್ರಮುಖ ಹೆಜ್ಜೆಯನ್ನು ಪ್ರತಿನಿಧಿಸುತ್ತದೆ.೧೨೦ ಎಂಎಸ್‌ಎಮ್‌ಇ ಗಳ ಮತ್ತು ಶೇಕಡಾ ೮೦ ಕ್ಕಿಂತ ಹೆಚ್ಚು ಸ್ಥಳೀಯ ಕೊಡುಗೆಗಳೊಂದಿಗೆ, ಜಾಗತಿಕ ಮಾನದಂಡಗಳನ್ನು ಪೂರೈಸುವ ತಾಂತ್ರಿಕವಾಗಿ ಅತ್ಯಾಧುನಿಕ ವೇದಿಕೆಗಳನ್ನು ನಿರ್ಮಿಸುವ ಭಾರತದ ಸಾಮರ್ಥ್ಯಕ್ಕೆ ಇದು ಸಾಕ್ಷಿಯಾಗಿದೆ.೧೦ ಸಾವಿರದ ೫೦೦ ಟನ್‌ಗಳಿಗಿಂತ ಹೆಚ್ಚು ಸ್ಥಳಾಂತರಿಸಬಲ್ಲ ಸಾಮರ್ಥ್ಯದ ಈ ಹಡಗು, ಸುಮಾರು ೧೨೦ ಮೀಟರ್ ಉದ್ದ ಮತ್ತು ೨೦ ಮೀಟರ್ ಅಗಲವಿದೆ. ಆಳ ಸಮುದ್ರ ಡೈವಿಂಗ್ ಕಾರ್ಯಾಚರಣೆಗಳು ಮತ್ತು ಸಂಕ?ದಲ್ಲಿರುವ ಜಲಾಂತರ್ಗಾಮಿ ನೌಕೆಗಳಿಗೆ ರಕ್ಷಣಾ ಕಾರ್ಯಾಚರಣೆಗಳಲ್ಲಿ ತೊಡಗುವುದು ಇದರ ಪ್ರಾಥಮಿಕ ಉದ್ದೇಶವಾಗಿದೆ.ತನ್ನ ನೀರೊಳಗಿನ ಕಾರ್ಯಾಚರಣೆಯ ಸಾಮರ್ಥ್ಯಗಳನ್ನು ಹೆಚ್ಚಿಸುವ ಮೂಲಕ, ನಿಸ್ತಾರ್ ರಿಮೋಟ್ಲಿ ಆಪರೇಟೆಡ್ ವೆಹಿಕಲ್ಸ್ ವ್ಯವಸ್ಥೆ ಹೊಂದಿದೆ.ಜಲಾಂತರ್ಗಾಮಿ ರಕ್ಷಣಾ ಕಾರ್ಯಾಚರಣೆಗಳಲ್ಲಿ, ಈ ಹಡಗು, ತೊಂದರೆಗೊಳಗಾದ ಜಲಾಂತರ್ಗಾಮಿ ನೌಕೆಗಳಿಂದ ಸಿಬ್ಬಂದಿಯನ್ನು ಸ್ಥಳಾಂತರಿಸಲು ಸಹಕರಿಸಲಿದೆ ಎಂದು

ನೌಕಾಪಡೆ ತಿಳಿಸಿದೆ.ನಿಸ್ತಾರ್ ಕಾರ್ಯಾರಂಭ ಭಾರತದ ರಕ್ಷಣಾ ವಲಯವನ್ನು ಸ್ವಾವಲಂಬಿಗೊಳಿಸುವಲ್ಲಿ ನಿರಂತರ ಪ್ರಗತಿಯನ್ನು ಪ್ರತಿಬಿಂಬಿಸುತ್ತದೆ. ಮತ್ತು ಭಾರತೀಯನೌಕಾಪಡೆಯು ತನ್ನ ನೀರೊಳಗಿನ ಯುದ್ಧ ಮತ್ತು ರಕ್ಷಣಾ ಸಾಮರ್ಥ್ಯಗಳನ್ನು ಬಲಪಡಿಸುವಲ್ಲಿ ಅಚಲ ಬದ್ಧತೆಯ ಪ್ರತೀಕವಾಗಿದೆ.ನಿಸ್ತಾರ್ ಕಾರ್ಯಾರಂಭ ಸಮಾರಂಭದಲ್ಲಿ ರಕ್ಷಣಾ ಖಾತೆ ರಾಜ್ಯ ಸಚಿವ ಸಂಜಯ್ ಸೇಠ್ ಮತ್ತು ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ ತ್ರಿಪಾಠಿ ಮತ್ತು ಇತರ ಹಿರಿಯ ಗಣ್ಯರು ಭಾಗವಹಿಸಲಿದ್ದಾರೆ.

><><><><><><><><><><

ಏಪ್ರಿಲ್ ೨೨ ರಂದು ಪಾಹಲ್ಗಾಂನಲ್ಲಿ ನಡೆದ ಭಯೋತ್ಪಾದಕ ದಾಳಿಯ ಹಿಂದಿನ ಪ್ರಮುಖ ಸಂಘಟನೆ - ದಿ ರೆಸಿಸ್ಟೆನ್ಸ್ ಫ್ರಂಟ್ - ಟಿಆರ್ ಎಫ್ ಅನ್ನು ಅಮೆರಿಕದ ವಿದೇಶಾಂಗ ಇಲಾಖೆ ಭಯೋತ್ಪಾದಕ ಸಂಘಟನೆ ಎಂದು ಗುರುತಿಸಿದೆ.ಈ ಕುರಿತು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೋ ರೂಬಿಯೋ ಮಾಹಿತಿ ನೀಡಿದ್ದು, ಟಿಆರ್ಎಫ್ ಅನ್ನು ವಿದೇಶಿ ಭಯೋತ್ಪಾದಕ ಸಂಘಟನೆ ಎಫ್‌ಟಿಒ ಹಾಗೂ ವಿಶೇಷವಾಗಿ ಗುರುತಿಸಲಾದ ಜಾಗತಿಕ ಭಯೋತ್ಪಾದಕ ಎಸ್‌ಡಿಜಿಟಿ ಎಂದು ಘೋಷಿಸಿದೆ.  ಈ ನಿರ್ಧಾರ ರಾಷ್ಟ್ರೀಯ ಭದ್ರತೆ, ಭಯೋತ್ಪಾದನೆ ವಿರುದ್ಧದ ಹೋರಾಟ ಹಾಗೂ ಪಾಹಲ್ಗಾಂ ದಾಳಿಗೆ ನ್ಯಾಯ ನೀಡಬೇಕೆಂಬ ಅಧ್ಯಕ್ಷ ಟ್ರಂಪ್ ಅವರ ಸಂಕಲ್ಪವನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದ್ದಾರೆ.ಟಿಆರ್ಎಫ್ ಎಂಬುದು ಲಷ್ಕರ್-ಎ-ತೊಯ್ಬಾ ಸಂಘಟನೆಯ ಶಾಖೆ ಹಾಗೂ ಪರೋಕ್ಷವಾಗಿ ಕಾರ್ಯನಿರ್ವಹಿಸುವ ಸಂಘಟನೆಯಾಗಿದೆ. ಈ ಸಂಘಟನೆ ಏಪ್ರಿಲ್ ೨೨ ರಂದು ೨೬ ನಾಗರಿಕರ ಸಾವಿಗೆ ಕಾರಣವಾದ ಪಾಹಲ್ಗಾಂ ದಾಳಿಗೆ ಜವಾಬ್ದಾರಿ ಹೊತ್ತಿದ್ದು, ಈ ಹಿಂದೆ ೨೦೨೪ರಲ್ಲಿ ಭಾರತೀಯ ಭದ್ರತಾ ಪಡೆಗಳ ಮೇಲೆ ನಡೆದ ಹಲವಾರು ದಾಳಿಗಳಿಗೂ ಟಿಆರ್ಎಫ್ ಹೊಣೆ ಹೊತ್ತಿದೆ.ಇದೇ ಸಂದರ್ಭದಲ್ಲಿ, ಮಂಗಳವಾರ ಚೀನಾದ ಟಿಯಾಂಜಿನ್‌ನಲ್ಲಿ ನಡೆದ ಎಸ್‌ಸಿಒ ವಿದೇಶಾಂಗ ಮಂತ್ರಿಗಳ ಸಭೆಯಲ್ಲಿ ಭಾರತ ವಿದೇಶಾಂಗ ಸಚಿವ ಎಸ್. ಜೈಶಂಕರ್, ಪಾಹಲ್ಗಾಂ ಭಯೋತ್ಪಾದಕ ದಾಳಿ ಉಲ್ಲೇಖಿಸಿ ಭಯೋತ್ಪಾದನೆ ವಿರುದ್ಧ ದೃಢ ನಿಲುವು ಅವಶ್ಯಕವೆಂದು ಒತ್ತಿಹೇಳಿದ್ದರು. ಈ ದಾಳಿಗೆ ವಿಶ್ವಸಂಸ್ಥೆ ಭದ್ರತಾ ಮಂಡಳಿ ಸಹ ಖಂಡನೆ ವ್ಯಕ್ತಪಡಿಸಿತ್ತು.

><><><><><><><><><><

ಹಂಗೇರಿಯ ಬುಡಫೆಸ್ಟ್ ನಲ್ಲಿ ನಡೆದ ಪೊಲ್ಯಾಕ್, ಇಮರೆ ಮತ್ತು ವರ್ಗಾ, ಜಾನೋಸ್ ಸ್ಮರಣಾರ್ಥ ಕುಸ್ತಿ ಪಂದ್ಯಾವಳಿಯಲ್ಲಿ ಪುರುಷರ ಫ್ರೀಸ್ಟೈಲ್ ೬೫ ಕೆ.ಜಿ ವಿಭಾಗದ ಪಂದ್ಯದಲ್ಲಿ ಭಾರತದ ಸುಜೀತ್ ಕಲಕಲ ಚಿನ್ನದ ಪದಕ ಗೆದ್ದಿದ್ದಾರೆ.ಫೈನಲ್ ಪಂದ್ಯದಲ್ಲಿ ಅವರು ಅಜರ್ ಬೈಜಾನ್ ನ ಆಲಿ ರಹೀಂಜಾದೆ ವಿರುದ್ಧ ೫-೧ ಅಂಕಗಳ ಅಂತರದ ಭರ್ಜರಿ ಗೆಲುವು ಸಾಧಿಸಿದರು. ಇದು ಭಾರತಕ್ಕೆ ೨೦೨೫ರಲ್ಲಿ ಜಾಗತಿಕ ಕುಸ್ತಿ ರ್‍ಯಾಂಕಿಂಗ್ ಪಂದ್ಯಾವಳಿಯಲ್ಲಿ ಮೊದಲ ಸುವರ್ಣ ಪದಕವಾಗಿದೆ. ಮತ್ತೊಂದೆಡೆ ಪುರುಷರ ೫೭ ಕೆ.ಜಿ. ವಿಭಾಗದ ಪಂದ್ಯದಲ್ಲಿ ಭಾರತದ ರಾಹುಲ್ ಕಂಚಿನ ಪದಕ ಪಡೆದರು.

><><><><><><><><><><><

ಭಾರತವನ್ನು ಆರೋಗ್ಯವಂತ ದೇಶವನ್ನಾಗಿಸಲು ರೋಗ ತಡೆಗಟ್ಟುವ, ಉತ್ತೇಜನಾತ್ಮಕ ಮತ್ತು ಉತ್ತಮ ಚಿಕಿತ್ಸಾ ಕೇಂದ್ರಿತ ಆರೋಗ್ಯ ಸೇವೆಗಳನ್ನು ಒದಗಿಸುವಲ್ಲಿ ಸರ್ಕಾರ ಸಮಗ್ರ ದೃಷ್ಟಿಕೋನದೊಂದಿಗೆ ಕೆಲಸ ಮಾಡುತ್ತಿದೆ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜಗತ್ ಪ್ರಕಾಶ್ ನಡ್ಡಾ ಹೇಳಿದ್ದಾರೆ.ನವದೆಹಲಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ದೇಶದಾದ್ಯಂತ ೧.೭೭ ಲಕ್ಷ ಆಯುಷ್ಮಾನ್ ಆರೋಗ್ಯ ಮಂದಿರಗಳನ್ನು ನಿರ್ಮಿಸಲಾಗಿದ್ದು, ಇವು ಸಾರ್ವಜನಿಕರು, ಆರೋಗ್ಯ ಸಂಸ್ಥೆಯೊಂದಿಗೆ ಹೊಂದುವ ಪ್ರಥಮ ಸಂಪರ್ಕ ಬಿಂದುಗಳಾಗಿವೆ ಎಂದು ತಿಳಿಸಿದರು.ಇವುಗಳು ಕೇವಲ ನಗರಗಳಲ್ಲಿ ಮಾತ್ರವಲ್ಲದೆ, ದೇಶದ ದೂರದ ಪ್ರದೇಶಗಳಲ್ಲಿಯೂ ಕಾರ್ಯನಿರ್ವಹಿಸುತ್ತಿವೆ. ಎಲ್ಲಾ ಆಯುಷ್ಮಾನ್ ಆರೋಗ್ಯ ಮಂದಿರಗಳನ್ನು ಟೆಲಿ-ಸಲಹಾ ಸೌಲಭ್ಯಗಳಿಂದ ಸಜ್ಜುಗೊಳಿಸಲಾಗಿದೆ ಎಂದು ಸಚಿವ ಜೆ.ಪಿ.ನಡ್ಡಾ ಹೇಳಿದರು.

><><><><><><><><><><><

ಕರಾವಳಿ ಕರ್ನಾಟಕ, ಕೇರಳ, ಮಾಹೆ, ತಮಿಳುನಾಡು, ಪುದುಚೇರಿ, ಕಾರೈಕಲ್, ಪಶ್ಚಿಮ ಮಧ್ಯಪ್ರದೇಶ, ಪಶ್ಚಿಮ ಉತ್ತರ ಪ್ರದೇಶ ಮತ್ತು ರಾಜಸ್ಥಾನದಲ್ಲಿ ಇಂದು ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ತಿಳಿಸಿದೆ.ಆಂಧ್ರಪ್ರದೇಶ, ತೆಲಂಗಾಣ, ಪೂರ್ವ ಮಧ್ಯಪ್ರದೇಶ, ಪೂರ್ವ ಉತ್ತರ ಪ್ರದೇಶ, ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡ ಸೇರಿದಂತೆ

ಈಶಾನ್ಯ ಭಾರತದಾದ್ಯಂತ ಇದೇ ರೀತಿಯ ಪರಿಸ್ಥಿತಿ ನಿರೀಕ್ಷಿಸಲಾಗಿದೆ.ಏತನ್ಮಧ್ಯೆ, ಮುಂದಿನ ಏಳು ದಿನಗಳಲ್ಲಿ ವಾಯುವ್ಯ, ಪಶ್ಚಿಮ, ಈಶಾನ್ಯ, ಪೂರ್ವ, ಮಧ್ಯ ಮತ್ತು ದಕ್ಷಿಣ ಪರ್ಯಾಯ ದ್ವೀಪಗಳಲ್ಲಿ ಗುಡುಗು ಸಹಿತ ಬಿರುಗಾಳಿ ಮತ್ತು ಮಿಂಚು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

><><><><><><><><><><